ಯಾವುದೇ ವಿಧವಾದ ಚಟುವಟಿಕೆಗಳಿಂದ ಶಾಂತಿ ಭಂಗವಾಗದಂತೆ ಉದ್ದೇಶಿಸಿ ಪೋಷಿಸಲ್ಪಟ್ಟಿದೆ. ಪ್ರಸ್ತುತ ಪ್ರಕೃತಿ ವಿಕೋಪದಿಂದಾಗಿ ಕೆಲವು ಗಿಡಮರಗಳು ಒಣಗಿ ಬಿದ್ದು ನಶಿಸುತ್ತಿರುವುದು ಸಹಜವಾಗಿರುತ್ತದೆ. ಹೀಗೆ ಬಿದ್ದಿರುವ ಗಿಡಮರಗಳು ಪರಿಸರ ಪ್ರಿಯರಿಗೆ ಹಾಗೂ ಜೈವಿಕ ಚಟುವಟಿಕೆಗಳ ಆವಾಸಸ್ಥಾನಗಳೆನಿಸಿ ಪ್ರದೇಶ ಭೂಪಲವತ್ತನ್ನು ಉತ್ತಮಗೊಳಿಸುವಲ್ಲಿ ಸಹಕಾರಿಯಾಗಿರುತ್ತದೆ. ಕಾಡ್ಗಿಚ್ಚು ಉಂಟಾಗುವ ಪ್ರಶ್ನೆಯನ್ನು ಅಲ್ಲಗಳೆಯುವಂತಿಲ್ಲ, ಇವುಗಳನ್ನು ತಡೆಗಟ್ಟಲು ಈ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಅನುಸರಿಸುತ್ತಾ ಹಾಗೂ ಯಶಸ್ವಿ ಪಡೆದಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಅಲ್ಲಲ್ಲಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಿದ್ದು ನಿಶ್ತಂತು ಉಪಕರಣಗಳ ಮೂಲಕ ಸಂದೇಶ ಹಾಗೂ ವಿಚಾರವಿನಿಮಯ ಶೀಘ್ರ ರೀತಿಯಲ್ಲಿ ನಡೆಯುವಂತೆ ಲಭ್ಯಗೊಳಿಸಲಾಗಿದೆ. ಹಾಲೀ ಇರುವ ಸಿಬ್ಬಂದಿವರ್ಗದವರ ಜೊತೆಗೆ ಬೆಂಕಿ ಜೀಳುವ ಸಂದರ್ಭದ ಕಾಲದಲ್ಲಿ ಪಂಗಾಮಿ ಬೆಂಕಿ ವಾಚಕರುಗಳನ್ನು ನೇಮಿಸಿಕೊಂಡು ಕಾಡಿಗೆ ಬೆಂಕಿ ಜೀಳುವುದನ್ನು ತಡೆಗಟ್ಟುವ ಹಾಗೂ ನಿಯಂತ್ರಿಸುವ ಕಾರ್ಯಚಟುವಟಿಕೆಗಳನ್ನು ಮಾಡಲಾಗುತ್ತಿದೆ. ಇದಕ್ಕಾಗಿ ವಾರ್ಷಿಕ ಅಂದಾಜು ವೆಚ್ಚ 70 ಲಕ್ಷ ರೂಪಾಯಿಗಳಾಗಿದ್ದು ಈ ಪೈಕಿ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಅಂದಾಜು 15 ಲಕ್ಷ ರೂಪಾಯಿ ವ್ಯಯ ಮಾಡಲಾಗುತ್ತಿದೆ. ಆದಕಾರಣ ರಾಷ್ಟ್ರೀಯ ಉದ್ಯಾನವನಗಳಲ್ಲಿ ಯಾವುದೇ ಆದಾಯದ ದೃಷ್ಟಿಕೋಣ ಅಥವಾ ಪ್ರದೇಶಕ್ಕೆ ಶಾಂತಿಭಂಗ ತರುವಂಥ ಚಟುವಟಿಕೆಗಳನ್ನು ಕೈಗೊಳ್ಳುವುದು ವನ್ಯಜೀವಿಗಳ ಹಾಗೂ ಅವುಗಳ ಆವಾಸಸ್ಥಾನ ರಕ್ಷಣೆ ಮತ್ತು ಪ್ರಕೃತಿದತ್ತ ಅಭಿವೃದ್ಧಿ ಹಿತದೃಷ್ಟಿಯಿಂದ ಸೂಕ್ತವಲ್ಲ. ಹಾಗೊಮ್ಮೆ ಅನಿವಾರ್ಯವಾದಲ್ಲಿ ರಾಜ್ಯಸರ್ಕಾರದ ವನ್ಯಜೀವಿ ಸಲಹಾಮಂಡಳಿಯ ಮುಂದೆ ಸಂಬಂಧಪಟ್ಟ ಸಮಸ್ಯೆಗಳನ್ನು ಮಂಡಿಸಿ ಅದರ ಅಭಿಪ್ರಾಯದ ಮೇರೆಗೆ ಕ್ರಮ ಜರುಗಿಸಲಾಗುವುದು.

**(ಎ) ಮಂಗಳೂರು ಮಹಾನಗರ ಪಾಲಿಕೆಗೆ ಎಂ.ಆರ್.ಪಿ.ಎಲ್. ಇತ್ಯಾದಿ ಸಂಸ್ಥೆಗಳಿಂದ ಬಾಕಿ ಉಳಿದಿರುವ ಹಣ.**

ಶ್ರೀ ಎಸ್. ಯೋಗೇಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಸರ್ಕಾರ ಬಡವರಿಗೊಂದು, ಶ್ರೀಮಂತರಿಗೊಂದು ನೀತಿಯನ್ನು ಅಳವಡಿಸುತ್ತಿದೆ ಎಂಬುದೇ ನನ್ನ ಒಂದು ಪ್ರಶ್ನೆ. ವಿಶೇಷವಾಗಿ ಉಳಿತಾಯ ಯೋಜನೆಯಲ್ಲಿ ಯಾರು ಕೆಲಸ ಮಾಡಿದ್ದಾರೆ ಅಂತಹ ಏಜೆಂಟರಿಗೆ ಕೊಡಬೇಕಾದಂಥ ಕಮೀಷನನ್ನು ಒಂದು ವರ್ಷದಿಂದ ಬಿಡುಗಡೆ ಮಾಡಿಲ್ಲ. ಎರಡನೆಯದಾಗಿ, ಕರ್ನಾಟಕ ಲಾಟರಿಯಲ್ಲಿ ಬಹುಮಾನ ಯಾರಿಗೆ ಬಂದಿದೆ, ಆ ಬಹುಮಾನವನ್ನು ಕೂಡ ಒಂದು ವರ್ಷದಿಂದ ಬಿಡುಗಡೆ ಮಾಡಿಲ್ಲ. ಇದು ಬಡವರಿಗೇ ಆದ ಒಂದು ನೀತಿ ಎಂದು ಇದ್ದರೆ, ಶ್ರೀಮಂತರಾದ ಎಂ.ಆರ್.ಪಿ.ಎಲ್. ಸಂಸ್ಥೆ, ಬಿ.ಎಸ್.ಎಫ್. ಎಂಬ ಸಂಸ್ಥೆ ಹಲವು ಕೋಟಿಗಳಷ್ಟು ಕೊಂಡಿದ್ದು ಅದನ್ನು ಮಂಗಳೂರು ಮಹಾನಗರಪಾಲಿಕೆಗೆ ಹಾಗೂ ಪ್ರಾಧಿಕಾರಕ್ಕೆ ಬಾಕಿ ಇಟ್ಟುಕೊಂಡಿದ್ದು ಅದನ್ನು ವಸೂಲಾತಿ ಮಾಡಲಿಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ಹೈಕೋರ್ಟ್‌ನಿಂದ ಸ್ಟೇ ತಂದಿದ್ದಾರೆ. ಸುಮಾರು ಒಂದು ವರ್ಷದಿಂದ ಹೈಕೋರ್ಟ್‌ನಿಂದ ಸ್ಟೆ ತಂದರೂ ಕೂಡ ನಮ್ಮ ಕಾನೂನಿನ ವಿಭಾಗ ಯಾವುದೇ ರೀತಿಯಲ್ಲಿ ಅದನ್ನು ತೆರವು ಗೊಳಸಲಿಕ್ಕೆ ಶಕ್ತ ಆಗಿಲ್ಲವೋ ಎಂದು ಹೇಳುವಂಥ ಒಂದು

ಸಂಶಯ ಕಾಡುತ್ತಿದೆ. ಇವೊತ್ತು ತಕ್ಷಣ ಆ ಸ್ಟೇಯನ್ನು ವೆಕೆಂಟ್ ಮಾಡಿಸಿ ಆ ಹಣವನ್ನು ಮಹಾನಗರ ಪಾಲಿಕೆಗೆ ಕುಡಿಯುವ ನೀರಿನ ಯೋಜನೆಗೆ ಕೊಡುವಂಥ ಒಂದು ಆದೇಶವನ್ನು ತಾವುಕೊಡಬೇಕು ಎಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಲಿಚ್ಛಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಹಾಜರಿ ಇಲ್ಲದಿದ್ದುದನ್ನು ಗಮನಿಸಿ) ಹೀಗಾದರೆ ಹೇಗೆ ಅಧ್ಯಕ್ಷರೇ, ಏನಾದರೂ ಅಂದರೆ ಜಗಳಕ್ಕೆ ಬರುತ್ತಾರೆ. ನಮ್ಮ ಅಧ್ಯಕ್ಷರ ಆಫೀಸಿನಿಂದ ಹೋಗುತ್ತದೆ, ಮಂತ್ರಿಗಳು ಇರಬೇಕಲ್ಲಾ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಕೆಲವು ವಿಚಾರಗಳನ್ನು ಎತ್ತುತ್ತಾರೆ. ಆ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹಾಜರಿದ್ದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಇವೊತ್ತು ಅದಕ್ಕೆ ಸಂಬಂಧಪಟ್ಟರತಕ್ಕ ಮಾಹಿತಿ ನನ್ನಲ್ಲಿ ಇಲ್ಲ, ನಾನು ಮಾಹಿತಿಯನ್ನು ತಂದುಕೊಡುತ್ತೇನೆ. ಕಾನೂನು ಇಲಾಖೆಗೆ ಸಂಬಂಧಪಟ್ಟಹಾಗೆ ಯಾವುದೋ ಒಂದು ವಿಚಾರವನ್ನು ಹೇಳಿದ್ದೀರಿ. ಎಂ.ಆರ್.ಪಿ.ಎಲ್.ರವರು ಕೊಡಬೇಕಾಗಿರತಕ್ಕ ಬಾಕಿಗೆ ಹೈಕೋರ್ಟಿಗೆ ಹೋಗಿ ಸ್ಟೇ ತಂದು ಈ ಕೆಲಸವನ್ನು ಮಾಡಿದ್ದಾರೆ ಎಂದು. ಇದರ ಬಗ್ಗೆ ನಾನು ಗಮನವನ್ನು ಹರಿಸಿ ಆ ತಡೆಯಾಜ್ಞೆಯಾವುದು ಇದೆ ಅದನ್ನು ತೆರವು ಮಾಡಲಿಕ್ಕೋಸ್ಕರ ಮತ್ತು ಸರ್ಕಾರಕ್ಕಾಗಲೀ, ಕಾರ್ಪೋರೇಷನ್‌ಗಾಗಲೀ ಬರಬೇಕಾಗಿರತಕ್ಕ ತೆರಿಗೆ ಯಾವುದು ಇದೆ ಅದನ್ನು ವಸೂಲಾತಿ ಮಾಡುವಂಥದ್ದಕ್ಕೆ ನಾನೇ ವೈಯಕ್ತಿಕವಾಗಿ ಗಮನವನ್ನು ಹರಿಸುತ್ತೇನೆ.

**(ಐ) ಅನುಕಂಪದ ಆಧಾರದ ಮೇಲೆ ಸ್ವೀಚ್ ಅಂಡ್ ಹಿಯರಿಂಗ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರನ ಪತ್ನಿಗೆ ಉದ್ಯೋಗ ನೀಡುವುದು.**

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡುವಪುರ) : ಮಾನ್ಯ ಅಧ್ಯಕ್ಷರೆ, ಸುಮಾರು 1919ನೇ ಇಸವಿಯಿಂದ ಬಹಳ ಸಫರ್ ಪಟ್ಟಿರತಕ್ಕಂಥ ಒಬ್ಬ ಮಹಿಳೆ, ಮಾಯಣ್ಣ ಎಂಬುವರು 22.12.1990ರಲ್ಲಿ ಮರಣ ಹೊಂದಿದ್ದಾರೆ, ಸ್ವೀಚ್ ಅಂಡ್ ಹಿಯರಿಂಗ್‌ನಲ್ಲಿ ಕೆಲಸ ಸೂಕ್ತ ಉದ್ಯೋಗವನ್ನು ಕೊಡಬೇಕೆಂದು ಕಮಿಟಿಯಲ್ಲಿ ತೀರ್ಮಾನ ಆಯಿತು. ಉದ್ದೇಶ ಪೂರ್ವಕವಾಗಿಯೆ ಸ್ವೀಚ್ ಅಂಡ್ ಹಿಯರಿಂಗ್‌ನಲ್ಲಿ ನಿರ್ದೇಶಕಿಯಾಗಿ ಕೆಲಸ ಮಾಡುತ್ತಿರುವಂತಹ ಮಹಿಳೆ, ಆ ಮಹಿಳೆಯ ಮೇಲೆ ವೈಯಕ್ತಿಕ ದ್ವೇಷದಿಂದ ಇದುವರೆವಿಗೂ ಅಂದರೆ 1991ರಿಂದ 1997ರವರೆಗೆ ಯಾವುದೇ ಕಾರಣಕ್ಕೂ ಆಕೆಗೆ ಉದ್ಯೋಗವನ್ನು ಕೊಟ್ಟಿಲ್ಲ. ಅವರಿಗೆ ಸೂಕ್ತವಾದ ಉದ್ಯೋಗವನ್ನು ಕೊಡದೆ ಈಗಾಗಲೇ ಸುಪ್ರೀಂ ಕೋರ್ಟಿನ ಆದೇಶವಿದೆ. ``However, without expressing an opinion on the maintainability of the Writ Retition, it is disposed of hoping that the Respondent would consider the case of petitioner to a suitable post on compassionate grounds including the fact of the law laid down by the Supreme Court in the case reported in 1991 S.C. 469. within a reasonable time" ಎಂದು ಹೇಳಿದ್ದಾರೆ. ಕಾಲವೆಂದರೆ, ಸ್ವಲ್ಪ ಕಾಲದಲ್ಲಿ